ಪ್ರಧಾನ ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿಸಿ ನಂ.**342/2018**

ಫಿರ್ಯಾದಿ : **ಎಂ/ಎಸ್ ಕೋರ್ ಗ್ರೀನ್ ಶುಗರ್ಸ್ ಅಂಡ್ ಫ್ಯೂಯಲ್ಸ್ ಪ್ರೈವೇಟ್ ಲಿಮಿಟೆಡ್.**

ಆರೋಪಿ : ಶ್ರೀ ಭೀಮನಗೌಡ ಬಸವಂತ್ರಾಯ ಕನ್ನೊಳ್ಳಿ ತಂದೆ ಬಸವಂತ್ರಾಯ ಕನ್ನೊಳ್ಳಿ, ವಃ 31 ವರ್ಷ, ಸಾಃ ನಂ.20, ಬೋರಗಿ ಗ್ರಾಮ, ತಾಃ ಸಿಂದಗಿ, ಜಿಃ ವಿಜಯಪುರ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಅಡಿಯಲ್ಲಿ ಆರೋಪಿತನ ಹೇಳಿಕ

ಪ್ರಶ್ನೆಃ1ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆಃ 2 : ದೂರುದಾರರ ಪರವಾಗಿ ಪ್ರಾಸಾ-1 ಶ್ರೀ ಬೆಲ್ಲಮ್ ಶ್ರೀಕಾಂತ ತಂದೆ ಅಂಜನೇಯಲು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಪಾಧಿತನಾದ ನೀವು ದೂರುದಾರ ಮೇ: ಕೋರ್ ಗ್ರೀನ್ ಶುಗರ್ ಕಂಪನಿಯೊಂದಿಗೆ 2016-17 ರ ಸಾಲಿನ ರೈತರ ಜಮೀನುಗಳಿಂದ ಕಬ್ಬಿನ ಬೆಳೆಯನ್ನು ಕಟಾವು ಮಾಡಿಸಿ ದೂರುದಾರ ಫ್ಯಾಕ್ಟರಿಗೆ ಸಾಗಾಟ ಮಾಡಿಸಲು ಒಪ್ಪಿಕೊಂಡು ದಿನಾಂಕ 09.08.2016 ರಂದು ಕಾರಾರು ಮಾಡಿಕೊಂಡು ರೂ.3,50,000/- ಮುಂಗಡ ಹಣವನ್ನು ಪಡೆದುಕೊಂಡಿರುತ್ತೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 3ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ನೀವು ಕೇವಲ ರೂ.27,139/- ಮೊತ್ತದ ಕೆಲಸ ನಿರ್ವಹಿಸಿದ್ದು ಬಾಕಿ ಮೊತ್ತ ರೂ.3,22,861/- ಹಾಗೂ ಬಡ್ಡಿ ಸೇರಿ ಒಟ್ಟು ರೂ 3,98,331/- ಹಣದ ಮರುಪಾವತಿಗಾಗಿ ದೂರುದಾರರಿಗೆ ನೀವು 30.01.2018 ರಂದು ನೀವು ಖಾತೆ ಹೊಂದಿರುವ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಿಂದಗಿ ಶಾಖೆಗೆ ಸೇರಿದ 039108 ಸಂಖ್ಯೆಯ ಚೆಕ್ ನಲ್ಲಿ ರೂ.3,98,331/-ಹಾಗೂ ದಿನಾಂಕ 30.01.2018 ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **4**ಃ ಪ್ರಾಸಾ **1** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ಚೆಕ್‌ನ್ನು ಪಿರ್ಯಾದುದಾರರು ದಿನಾಂಕ 09.02.2018 ರಂದು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಇಂಡಿಯಾನ್ ಬ್ಯಾಂಕ್ ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ, "ಸಾಕಷ್ಟು ಹಣ ಇಲ್ಲ" ಎಂಬ

ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ 09.02.2018 ರಂದು ವಾಪಸ್ಸು ನೀಡಿರುತ್ತಾರೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **5**ಃ ಪ್ರಾಸಾ **1** ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ 07.03.2018 ರಂದು ಅಪಾದಿತರಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ 10.03.2018 ರಂದು ಜಾರಿಯಾಗಿರುತ್ತದೆ. ಆದರೂ ನೀವು ನೋಟಿಸಿಗೆ ಉತ್ತರ ನೀಡದೆ ಅಥವಾ ಸಾಲದ ಹಣವನ್ನಾಗಲೀ ನೀಡದೇ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **6** ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಚಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **7** ಃ ನಿಮ್ಮ ಪರ ಯವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

**(**ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 19.02.2026<br>
ಸ್ಥಳಃ ಯಾದಗಿರಿ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ ಸಿ<br>
ನ್ಯಾಯಾಧೀಶರು,ಯಾದಗಿರಿ.